ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 25 ಡಿವಿಪಿ(2) 2014

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:04-07-2015.

ಇವರಿಗೆ,

ಪ್ರಧಾನ ಕಾರ್ಯದರ್ಶಿಗಳು,
ಉನ್ನತ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560 001.

ಮಾನ್ಯರೆ,

ವಿಷಯ: ಬೆಂಗಳೂರಿನ ಕೆ.ಐ.ಇ.ಟಿ ಪಾಲಿಟೆಕ್ನಿಕ್‌ನಲ್ಲಿ 2015-16ನೇ ಸಾಲಿಗೆ ಪ್ರವೇಶಗಳನ್ನು ರದ್ದುಪಡಿಸಲು ಕೋರಿದ್ದು, ನ್ಯಾಯಾಲಯದ ದಿನಾಂಕ: 25/6/2015 ರ ಮಧ್ಯಂತರ ಆದೇಶದ ಪ್ರಕಾರ ಪ್ರವೇಶಗಳನ್ನು ಮುಂದುವರಿಸಲು ಕೋರಿರುವ ಬಗ್ಗೆ.

ಉಲ್ಲೇಖ:
1. ನಿರ್ದೇಶನಾಲಯದ ಸಮ ಸಂಖ್ಯೆ ಪತ್ರ ದಿನಾಂಕ: 18/6/2015.
2. ರಿಟ್ ಅರ್ಜಿ ಸಂಖ್ಯೆ: 6941/2015 (ಜಿಎಂ-ಕೆಎಸ್‌ಆರ್) ಇದರ ಮೇಲೆ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆ ದಿ: 25/6/2015.
3. ಬೆಂಗಳೂರಿನ ಕರ್ನಾಟಕ ಟೆಕ್ನಿಕಲ್ ಎಜುಕೇಷನ್ ಸೊಸೈಟಿಯ ಅಧ್ಯಕ್ಷರ ಮನವಿ ಪತ್ರ ಸಂಖ್ಯೆ: ಕೆಟಿಇಎಸ್/108/2015-16, ದಿನಾಂಕ: 27/6/2014.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ನಮೂದಿಸಿರುವ ಪತ್ರ ದಿನಾಂಕ: 18/6/2015 ರಲ್ಲಿ ಬೆಂಗಳೂರಿನ ಕರ್ನಾಟಕ ಟೆಕ್ನಿಕಲ್ ಎಜುಕೇಷನ್ ಸೊಸೈಟಿಯ ವತಿಯಿಂದ ನಡೆಸಲ್ಪಡುತ್ತಿರುವ ಕೆಐಇಟಿ ಪಾಲಿಟೆಕ್ನಿಕ್‌ನಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಮಧ್ಯಂತರ ಆದೇಶ ದಿನಾಂಕ: 1/4/2015 ರಲ್ಲಿ ನೀಡಿರುವ ತಡೆಯಾಜ್ಞೆಯಂತೆ ಹಾಗೂ ಪಾಲಿಟೆಕ್ನಿಕ್‌ನ ಹೊಸ ಆಡಳಿತ ಮಂಡಳಿಯ ಅಧ್ಯಕ್ಷರು ಮನವಿ ಸಲ್ಲಿಸಿರುವಂತೆ ಬೆಂಗಳೂರಿನ ಕೆಐಇಟಿ ಪಾಲಿಟೆಕ್ನಿಕ್‌ನ 2015-16 ನೇ ಸಾಲಿನ ಪ್ರವೇಶ ಪ್ರಕ್ರಿಯೆಯನ್ನು ನಿಲ್ಲಿಸಲು ಸರ್ಕಾರದ ಅನುಮತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು (ಪ್ರತಿ ಲಗತ್ತಿಸಿದೆ). ಆದರೆ, ದಿನಾಂಕ: 25/6/2015 ರಂದು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 6941/2015 (ಜಿಎಂ ಕೆಎಸ್‌ಆರ್) ಮೇಲೆ ನೀಡಿರುವ ಆದೇಶದಲ್ಲಿ **"The Petitioner shall not interfere with the admission process taking advantage of the interim Order herein"** ಎಂದು ಆದೇಶಿಸಿರುತ್ತದೆ. ಹಾಗೂ ಉಲ್ಲೇಖ(3) ರಲ್ಲಿ ನಮೂದಿಸಿರುವ ಪತ್ರ ದಿನಾಂಕ: 27/06/2015 ರಲ್ಲಿ 2015-16ನೇ ಸಾಲಿನ ಪ್ರವೇಶ ಪ್ರಕ್ರಿಯೆಗೆ ಅನುವು ಮಾಡಿಕೊಡಬೇಕಾಗಿ ಕರ್ನಾಟಕ ಟೆಕ್ನಿಕಲ್ ಎಜುಕೇಷನ್ ಸೊಸೈಟಿಯ ಅಧ್ಯಕ್ಷರು ಕೋರಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ: 25/6/2015 ರಲ್ಲಿ ರಿಟ್ ಅರ್ಜಿಯ ಸಂಖ್ಯೆ: 6941/2015 ನ್ನು ಸಲ್ಲಿಸಿರುವ ಅರ್ಜಿದಾರ (Petitioner) ಪಾಲಿಟೆಕ್ನಿಕ್‌ನ ಪ್ರವೇಶ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಆದೇಶ ನೀಡಿರುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶವನ್ನು ಪಾಲಿಸುವ ಸಲುವಾಗಿ ಬೆಂಗಳೂರಿನ ಕೆಐಇಟಿ ಪಾಲಿಟೆಕ್ನಿಕ್‌ನಲ್ಲಿ 2015-16ನೇ ಸಾಲಿನ ಪ್ರವೇಶ ಪ್ರಕ್ರಿಯೆಯನ್ನು ಮುಂದುವರಿಸಲು ಘನ ಸರ್ಕಾರದ ಅನುಮತಿ ನೀಡಬೇಕಾಗಿ ಕೋರಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು.

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ,

1. ಅಧ್ಯಕ್ಷರು, ಕರ್ನಾಟಕ ಟೆಕ್ನಿಕಲ್ ಎಜುಕೇಷನ್ ಸೊಸೈಟಿ, ಸಾಲಹುಣಸೇ, ಕಗ್ಗಲೀಪುರ, ಬೆಂಗಳೂರು-82.
2. ಪ್ರಿನ್ಸಿಪಾಲರು, ಕೆಐಇಟಿ ಪಾಲಿಟೆಕ್ನಿಕ್, ನಂ.501, ಸರ್ವೆ ನಂ. 224/226, ಸಾಲಹುಣಸೇ, ಉದಯಪುರ ಅಂಚೆ, ಕನಕಪುರ ಮುಖ್ಯ ರಸ್ತೆ, ಬೆಂಗಳೂರು-560082.
3. ಜಂಟಿ ನಿರ್ದೇಶಕರು (ಆಡಳಿತ / ಪರೀಕ್ಷೆ), ನಿರ್ದೇಶನಾಲಯ, ಬೆಂಗಳೂರು.
4. ಸಹಾಯಕ ನಿರ್ದೇಶಕರು (ಎಸಿಎಂ), ನಿರ್ದೇಶನಾಲಯ, ಬೆಂಗಳೂರು.
5. ಅಧೀಕ್ಷಕರು, ಎಸಿಎಂ ವಿಭಾಗ, ನಿರ್ದೇಶನಾಲಯ, ಬೆಂಗಳೂರು.
6. ನಿರ್ದೇಶನಾಲಯದ ಇ-ಗೌರ್‌ನೆನ್ಸ್ ವಿಭಾಗಕ್ಕೆ ದಿನಾಂಕ: 18/6/2015 ರ ಪತ್ರದ ಬದಲಾಗಿ ಈ ಪತ್ರವನ್ನು ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.